



# ರಾಮಕೃಷ್ಣ-ವಿವೇಕಾನಂದ ಭಾವಪ್ರಚಾರ ಪರಿಷತ್ತಿನ ೩ನೇ ವಾರ್ಷಿಕ ಸಮ್ಮೇಳನ


ಕರ್ನಾಟಕ ರಾಜ್ಯದ ರಾಮಕೃಷ್ಣ-ವಿವೇಕಾನಂದ ಭಾವಪ್ರಚಾರ ಪರಿಷತ್ತಿನ ಮೂರನೇ ರಾಜ್ಯಮಟ್ಟದ ಸಮ್ಮೇಳನ ಧಾರವಾಡದ ರಾಮಕೃಷ್ಣ ವಿವೇಕಾನಂದ ಆಶ್ರಮದಲ್ಲಿ ೨೦೧೬ರ ಡಿಸೆಂಬರ್ ೨೯, ೩೦ ಹಾಗೂ ೩೧ ರಂದು ನಡೆಯಿತು. ಸಮಾವೇಶದ ಮೊದಲ ದಿನ ಬೆಳಿಗ್ಗೆ ೮-೩೦ ರಿಂದ ಶ್ರೀರಾಮಕೃಷ್ಣರ ಭಾವಚಿತ್ರವನ್ನ ಹೊತ್ತ ಆನೆ, ವಾದ್ಯಗಳೊಂದಿಗೆ ಶೋಭಾಯಾತ್ರೆ ನಡೆಯಿತು. ಪೂರ್ಣಕುಂಭವನ್ನು ಹೊತ್ತ ನೂರಾರು ಮಂದಿ ತಾಯಂದಿರು, ಸುಮಾರು ೧೦೦೦ ಕಾಲೇಜು ವಿದ್ಯಾರ್ಥಿಗಳು ಹಾಗು ಸಾರ್ವಜನಿಕರು ಇದರಲ್ಲಿ ಭಾಗ ವಹಿಸಿದ್ದರು. ಕೇಂದ್ರ ಸಚಿವ ಶ್ರೀ ರಮೇಶ ಜಿಗಜಿಣಗಿ ಅವರು ಸಮ್ಮೇಳನವನ್ನು ಉದ್ಘಾಟಿಸಿದರು. ರಾಮಕೃಷ್ಣ ಮಠ ಮತ್ತು ಮಿಷನ್ನಿನ ಟ್ರಸ್ಟಿಗಳು ಹಾಗೂ ಅಖಿಲ ಭಾರತ ಭಾವಪ್ರಚಾರ ಪರಿಷತ್ತಿನ ಮುಖ್ಯಸ್ಥರಾದ ಪೂಜ್ಯ ಸ್ವಾಮಿ ಗಿರೀಶಾನಂದಜಿ ಮಹಾರಾಜ್ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಸಮ್ಮೇಳನದ ಮೊದಲ ಅರ್ಧ ದಿನ ಆಯೋಜಿಸಲಾಗಿದ್ದ **ಯುವ ಸಮಾವೇಶ**ದಲ್ಲಿ ಸುಮಾರು ೫೫೦೦ಕ್ಕೂ ಹೆಚ್ಚು ಯುವಕರು ಭಾಗ ವಹಿಸಿದ್ದರು. ಶ್ರೀ ಚಕ್ರವರ್ತಿ ಸೂಲಿಬೆಲೆ ಹಾಗೂ ಶ್ರೀ ಹರ್ಷವರ್ಧನ ಶೀಲವಂತ ಅವರು ಪ್ರಧಾನ ಉಪನ್ಯಾಸ ಮಾಡಿದರು. ಮೂರು ದಿನದ ಸಮ್ಮೇಳನದಲ್ಲಿ '**ಶ್ರೀ ರಾಮಕೃಷ್ಣ ಚಿಂತನಧಾರೆ**', '**ಶ್ರೀಶಾರದಾ ದೇವಿ ಚಿಂತನಧಾರೆ**' ಹಾಗೂ '**ಸ್ವಾಮಿ ವಿವೇಕಾನಂದರ ಚಿಂತನಧಾರೆ**' ಗೋಷ್ಠಿಗಳನ್ನು ಏರ್ಪಡಿಸಲಾಗಿತ್ತು. ಗೋಷ್ಠಿಗಳಲ್ಲಿ ಧಾರವಾಡದ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀ ವಿ. ಶ್ರೀಶಾನಂದ, ಧಾರವಾಡದ ಉಪನ್ಯಾಸಕರಾದ ಡಾ. ಪ್ರಜ್ಞಾ ಮತ್ತಿಹಳ್ಳಿ ಹಾಗೂ ಉಡುಪಿಯ ಖ್ಯಾತ ವಾಗ್ಮಿ ಶ್ರೀ ಪ್ರಕಾಶ ಮಲ್ಪೆ, ತಮಿಳುನಾಡಿನ ಉದಕಮಂಡಲದ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ರಾಘವೇಶಾನಂದಜಿ, ವಿಶಾಖಪಟ್ಟಣಂ ರಾಮಕೃಷ್ಣ ಮಿಷನ್ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮವಿದಾನಂದಜಿ, ಮಂಗಳೂರು ರಾಮಕೃಷ್ಣ ಮಿಷನ್ನಿನ ಅಧ್ಯಕ್ಷರಾದ ಸ್ವಾಮಿ ಜಿತಕಾಮಾನಂದಜಿ, ಮುಂಬೈ ರಾಮಕೃಷ್ಣ ಮಿಷನ್ನಿನ ಅಧ್ಯಕ್ಷರು ಹಾಗೂ ರಾಮಕೃಷ್ಣ ಮಠ, ಮಿಷನ್ನಿನ ಟ್ರಸ್ಟಿಗಳಾದ ಸ್ವಾಮಿ ಮುಕ್ತಿದಾನಂದಜಿ, ಮೈಸೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮಜ್ಞಾನಂದಜಿ, ಪೊನ್ನಂಪೇಟೆ ರಾಮಕೃಷ್ಣ ಶಾರದಾಶ್ರಮದ ಅಧ್ಯಕ್ಷರಾದ ಸ್ವಾಮಿ ಬೋಧಸ್ವರೂಪಾನಂದಜಿ, ತುಮಕೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ವೀರೇಶಾನಂದ ಸರಸ್ವತಿ, ಗದಗ-ವಿಜಯಪುರ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿರ್ಭಯಾನಂದ ಸರಸ್ವತಿ, ತಿರುಪತಿ ರಾಮಕೃಷ್ಣ ಮಿಷನ್ನಿನ ಕಾರ್ಯದರ್ಶಿಗಳಾದ ಸ್ವಾಮಿ ಅನುಪಮಾನಂದಜಿ, ಬೆಂಗಳೂರು ರಾಮಕೃಷ್ಣ ಆಶ್ರಮದ ಸ್ವಾಮಿ ಸ್ವಾತ್ಮಾರಾಮಾನಂದಜಿ, ಶಿವನಹಳ್ಳಿ ರಾಮಕೃಷ್ಣ ಆಶ್ರಮದ ಸ್ವಾಮಿ ಸೌಖ್ಯಾನಂದಜಿ ಹಾಗೂ ಇನ್ನಿತರ ಸಾಧುಗಳು ಹಾಗೂ ಮಾತಾಜಿಗಳು ಪ್ರವಚನ ನೀಡಿದರು. ಇವರಲ್ಲದೆ ಧಾರವಾಡ ಜಿಲ್ಲೆಯ ಅನೇಕ ಮಠಾಧೀಶರು ಸಮ್ಮೇಳನದಲ್ಲಿ ಉಪಸ್ಥಿತರಿದ್ದರು. ಹೊರ ರಾಜ್ಯಗಳಿಂದ, ರಾಜ್ಯದ ಹಲವು ಜಿಲ್ಲೆಗಳಿಂದ ಬಂದ ಹಾಗೂ ಸ್ಥಳೀಯರಾದ ೩೦೦೦ಕ್ಕಿಂತಲೂ ಹೆಚ್ಚು ಜನ ಭಕ್ತ ಪ್ರತಿನಿಧಿಗಳು ಭಾಗ ವಹಿಸಿದ್ದರು. ಮೂರು ದಿವಸಗಳು ಮಧ್ಯಾಹ್ನ ಪ್ರಸಾದದ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಸಂಜೆ ಆರಾತ್ರಿಕದ ನಂತರ ಕೇರಳದ ೧೧ ವರ್ಷದ ಗಾಯಕಿ ಕುಮಾರಿ ಸೂರ್ಯಗಾಯತ್ರಿ, ಖ್ಯಾತ ಹಿಂದೂಸ್ತಾನಿ ಗಾಯಕ ಪಂಡಿತ್ ಜಯತೀರ್ಥ ಮೇವುಂಡಿ ಹಾಗೂ ಕೊನೆಯ ದಿನ ಕೊಲ್ಹಾಪುರದ ಶ್ರೀ ಶುಕ್ಲಾ ಹಾಗೂ ಸಂಗಡಿಗರಿಂದ '**ಜಾಗೋ ಹಿಂದೂಸ್ತಾನ್**' ಕಾರ್ಯಕ್ರಮ ಜರುಗಿತು. ಮೂರು ದಿನಗಳಲ್ಲೂ ಬೆಳಿಗ್ಗೆ ೬.೩೦ ರಿಂದ ೮.೩೦ರ ವರೆಗೆ ಸಂಕೀರ್ತನ ಸತ್ಸಂಗ ಹಾಗೂ ಯೋಗ-ಧ್ಯಾನ ತರಗತಿಗಳನ್ನು ಏರ್ಪಡಿಸಲಾಗಿತ್ತು.

ದಿನಾಂಕ ೩೦ರಂದು ಲೋಕ ಕಲ್ಯಾಣಾರ್ಥವಾಗಿ ಶ್ರೀರಾಮಕೃಷ್ಣ ಹೋಮ ಜರುಗಿತು . ನಂತರ ಆಶ್ರಮದ ಭಕ್ತರಿಂದ ಯತಿಪೂಜೆ ನೆರವೇರಿತು. ಸಮ್ಮೇಳನದಲ್ಲಿ ಭಾಗವಹಿಸಿದ ಹೊರಊರಿನ ಪ್ರತಿನಿಧಿಗಳಿಗೆ ವಸತಿ, ಸಂಚಾರ ಹಾಗೂ ಊಟೋಪಚಾರ ವ್ಯವಸ್ಥೆ ಮಾಡಲಾಗಿತ್ತು.







# ಶ್ರೀ ಶಾರದಾ ಜ್ಞಾನಸುಧಾ ೨೦೧೬

**ಮೈ**ಸೂರಿನ ಶ್ರೀರಾಮಕೃಷ್ಣ ಆಶ್ರಮವು ಆಯೋಜಿಸಿದ್ದ ''**ಶಾರದಾ ಜ್ಞಾನಸುಧಾ ೨೦೧೬ ರಸಪ್ರಶ್ನೆ ಕಾರ್ಯಕ್ರಮ**''ದ ಬಹುಮಾನ ವಿತರಣಾ ಸಮಾರಂಭವನ್ನು ಡಿಸೆಂಬರ್ ೩೧, ೨೦೧೬ ರಂದು ಸಾಯಂಕಾಲ ಆಶ್ರಮದ ಸಭಾಂಗಣದಲ್ಲಿ ನಡೆಸಲಾಯಿತು. ಆಶ್ರಮದ ಅಧ್ಯಕ್ಷರಾದ ಪೂಜ್ಯ ಸ್ವಾಮಿ ಆತ್ಮಜ್ಞಾನಂದಜಿ ಹಾಗೂ ವಿದ್ಯಾಶಾಲೆಯ ಪೂಜ್ಯ ಸ್ವಾಮಿ ಯುಕ್ತೇಶಾನಂದಜಿಯವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಿಜೇತರಿಗೆ ಬಹುಮಾನ ವಿತರಿಸಿದರು.

ರಾಜ್ಯಮಟ್ಟದಲ್ಲಿ ನಡೆಸಲಾಗಿದ್ದ ಈ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಸುಮಾರು ೩೩೦ ಶಾಲಾ ಕಾಲೇಜುಗಳಿಂದ ೩೦,೦೦೦ ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಪಾಲ್ಗೊಂಡಿದ್ದರು. ಕಳೆದ ೧೩ ವರ್ಷಗಳಿಂದ ನಡೆಸಲಾಗುತ್ತಿರುವ ಈ ಕಾರ್ಯಕ್ರಮದಲ್ಲಿ ಇಲ್ಲಿಯವರೆಗೆ ೭,೪೫,೦೦೦ ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ. ದಿವ್ಯತ್ರಯರ ಜೀವನ-ಸಂದೇಶ, ವ್ಯಕ್ತಿತ್ವ ನಿರ್ಮಾಣ, ಧ್ಯಾನ ಮತ್ತು ಏಕಾಗ್ರತೆ, ಧರ್ಮ, ರಾಷ್ಟ್ರ ನಿರ್ಮಾಣ ಮೊದಲಾದ ಹಲವಾರು ವಿಷಯಗಳ ಮೇಲಿನ ಪ್ರಶ್ನೆಗಳನ್ನೊಳಗೊಂಡ ಪ್ರಶ್ನೆಪತ್ರಿಕೆಗಳಿಗೆ ಈ ವಿದ್ಯಾರ್ಥಿಗಳು ಉತ್ತರಿಸಿದ್ದಾರೆ. ಈ ವರ್ಷ ಸೋದರಿ ನಿವೇದಿತಾ ಅವರ ೧೫೦ ನೇ ಜನ್ಮಮಹೋತ್ಸವದ ವರ್ಷಾಚರಣೆಯ ಅಂಗವಾಗಿ ''**ನಿವೇದಿತಾ-ಜೀವನ ಸಂದೇಶ**'' ಎನ್ನುವ ಪುಸ್ತಕದ ಮೇಲೆಯೂ ರಸಪ್ರಶ್ನೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

